ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 436/2017
ಪಿ.ಡಬ್ಲ್ಯೂ ಃ 03

ದಿನಾಂಕಃ 29-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಮಾನ್ಯ ಎ ಜಿ ಪಿ ಯವರಿಂದಃ

ನಾನು ತಲ್ಲೂರಿನ ಕೋಟೆಬಾಗಿಲುವಿನಲ್ಲಿ ವಾಸವಿರುತ್ತೇನೆ. ನಾನು ವಾಸವಿರುವ ಮನೆಗೆ ನಂಬರ್ ಇರುವ ಬಗ್ಗೆ ಗೊತ್ತಿರುವುದಿಲ್ಲ. ನನ್ನ ಗಂಡನ ಮನೆಯ ಕುಂದಾಪುರದಲ್ಲಿ ಇರುತ್ತದೆ, ನಾವು ಬಾಡಿಗೆ ಮನೆಯಲ್ಲಿ ಇರುತ್ತೇವೆ, ಮನೆಯ ವಿಳಾಸ ಗೊತ್ತಿರುವುದಿಲ್ಲ. ಸರಕಾರಿ ಜಾಗದಲ್ಲೇ ನಾವು ಬ್ಲಾಕಿನಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತೇವೆ. ಅದು ಸರಕಾರಿ ಜಾಗ ಎಂದು ನಮಗೆ ಗೊತ್ತಿರುತ್ತದೆ. ಬ್ಲಾಕಿನಲ್ಲಿ ಮನೆ ಕಟ್ಟಿರುತ್ತೇವೆ ಎಂದು ನಾನು ಫೋಟೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ.15 ಮತ್ತು 16 ರಲ್ಲಿ ಗುಡಿಸಲುಗಳು ಕಾಣುತ್ತವೆ ಎಂದರೆ ಸರಿ.

2. ನಿಪಿ.6 ಮತ್ತು 7 ರ ಫೋಟೋದಲ್ಲಿ ನಾನು ಇರುವುದಿಲ್ಲ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ತಲ್ಲೂರಿನ ಸರಕಾರಿ ಶಾಲೆಯಲ್ಲಿ ಮಕ್ಕಳು ಓದುತ್ತಿರುತ್ತಾರೆ. ನಾನು ವಾಸ ಮಾಡಿಕೊಂಡಿರುವ ಜಾಗದ ಚಕ್ಕುಬಂದಿ ನನಗೆ ನೆನಪಿರುವುದಿಲ್ಲ. ನಾನು ಸ್ಥಳದಲ್ಲಿ ವಾಸ ಇಲ್ಲದೇ ಇದ್ದರೂ ಸಹ ದಾಖಲೆಗಳನ್ನು ಸೃಷ್ಟಿಸಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರಕಾರಿ ಸ್ಥಳದಲ್ಲಿ ವಾಸವಿಲ್ಲದೇ ಇದ್ದುದರಿಂದ ಚಕ್ಕುಬಂದಿ ನನಗೆ ಹೇಳುಬರುತ್ತಿಲ್ಲ ಎಂದರೆ ಸರಿಯಲ್ಲ. ನಾನು ಕುಂದಾಪುರದಲ್ಲಿ ವಾಸವಿರುತ್ತೇವೆ ಎಂದರೆ ಸರಿಯಲ್ಲ. ಆ ಗುಡಿಸಲಿನಲ್ಲಿ ಯಾರೂ ವಾಸವಿರುವುದಿಲ್ಲ ಎಂದಿರೆ ಸರಿಯಲ್ಲ.

3. ಈಗ ಬಾಡಿಗೆ ಮನೆಯಲ್ಲಿ ವಾಸವಿರುವುದಿಲ್ಲ ಎಂದು ನುಡಿಯುತ್ತಾರೆ. ಕೋಟೆಬಾಗಿಲಿನಲ್ಲಿ ನಾನು ವಾಸವಿರುವ ಜಾಗದ ಸರ್ವೆ ನಂಬ್ರ ನನಗೆ ಗೊತ್ತಿರುವುದಿಲ್ಲ. ಸರಕಾರಿ ಜಾಗದಲ್ಲಿ ವಾಸವಿರುವ ಬಗ್ಗೆ ಪಾವತಿ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ನೀರಿನ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಇರುವ ದಾಖಲೆಗಳನ್ನು ನೋಡಿ ವಿದ್ಯುತ್ಚ್ಛಕ್ತಿ ಬಿಲ್ಲು, ನೀರಿನ ಬಿಲ್ಲು ಹಾಗೂ ತೆರಿಗೆ ರಶೀದಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಾಸವಿರುವ ಜಾಗಕ್ಕೆ ಯಾವುದೇ ವಿದ್ಯುತ್ ಸಂಪರ್ಕ ಹಾಗೂ ನೀರಿನ

ವ್ಯವಸ್ಥೆ ಇರುವುದಿಲ್ಲ ಎಂದರೆ ಸಾಕ್ಷಿ ಈಗ ನೀರಿನ ತೆರಿಗೆ ಪಾವತಿಸಬೇಕು ಎಂದು ನುಡಿಯುತ್ತಾರೆ.

4. ಸರಕಾರಕ್ಕೆ ಜಾಗ ಮಂಜೂರು ಮಾಡಿಕೊಡಿ ಎಂದು ನಾನು ಅರ್ಜಿ ಸಲ್ಲಿಸಿರುತ್ತೇನೆ. ಆ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ವಾಸವಿರುವುದಿಲ್ಲ, ಕುಂದಾಪುರದ ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರಕಾರಿ ಜಾಗದ ಮೇಲೆ ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿ. ಸರಕಾರಿ ಜಾಗದ ಮೇಲೆ ಪರಿಹಾರ ಕೇಳಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸರಕಾರಿ ಜಾಗವನ್ನು ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾಸ ಮಾಡಲು ಯಾವುದೇ ಜಾಗ ಇರುವುದಿಲ್ಲ ಎಂದು ತಹಶೀಲ್ದಾರರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಯಾವುದೇ ದಾಖಲಾತಿ ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ